ಎನ್ನುವ ವಾರಾನ್ನದ ಹುಡುಗ ಈ ಸಂಕೀರ್ಣದಲ್ಲಿ ಎಲ್ಲರಿಗೂ ಬೇಕಾದವನು. ಬೇರೆಯವರು ಮಾಡಿದ ತಪ್ಪನ್ನು ತನ್ನ ಮೇಲೆ ಹಾಕಿಕೊಳ್ಳುವ ಶೇಖರ್ ಜೈಲಿಗೆ ಹೋಗಿ, 'ಅಪರಾಧಿಗಳೂ ಮನುಷ್ಯರೆ' ಎನ್ನುವ ಪುಸ್ತಕ ಬರೆಯುತ್ತಾನೆ. ಅನಾಥ ಶೇಖರ್ ಈ ಸಂಕೀರ್ಣದ ವಾರಸುದಾರ ಎನ್ನುವ ಸತ್ಯದೊಂದಿಗೆ ಸಿನಿಮಾ ಕೊನೆಗೊಳ್ಳುತ್ತದೆ. ಗಾಂಧಿಯ ಹೆಸರನ್ನು ಒಂದು ವಸತಿ ಸಂಕೀರ್ಣಕ್ಕೆ ಬಳಸಿಕೊಂಡಿರುವುದಷ್ಟೇ ಈ ಚಿತ್ರದ ವಿಶೇಷವಲ್ಲ; ಗಾಂಧಿಯ ಮೌಲ್ಯಗಳ ಪ್ರಯೋಗಶಾಲೆಯ ರೂಪದಲ್ಲೂ ಈ ಸಂಕೀರ್ಣ ಬಳಕೆಯಾಗುತ್ತದೆ. ಚಿತ್ರ ಆರಂಭವಾಗುವುದೇ 'ಗಾಂಧಿ ಜಯಂತಿ' ಆಚರಣೆ ಮೂಲಕ. ಬಾಲಕನೊಬ್ಬ ಪ್ರತಿಯೊಂದು ಮನೆಗೂ ಹೋಗಿ ಗಾಂಧಿ ಜಯಂತಿಗೆ ಎಲ್ಲರನ್ನೂ ಆಹ್ವಾನಿಸುವ ಚಿತ್ರಣ ಸೊಗಸಾಗಿದೆ. ಈ ಸಂದರ್ಭದಲ್ಲಿ ಬಳಕೆಯಾಗಿರುವ 'ರಘುಪತಿ ರಾಘವ ರಾಜಾರಾಮ್' ಗೀತೆ ಚಿತ್ರದ ವಿಶೇಷಗಳಲ್ಲೊಂದು.

ರಾಜ್‌ಕುಮಾರ್ ಗಾಂಧಿಯ ಪಾತ್ರದಲ್ಲಿ ನಟಿಸದೆ ಹೋದರೂ ಗಾಂಧಿ ಆಶಯಗಳನ್ನು ಬಿಂಬಿಸುವ ಕಥೆಗಳಲ್ಲಿ ಅಭಿನಯಿಸಿದ್ದಾರೆ. ಇದಕ್ಕೆ ಉತ್ತಮ ಉದಾಹರಣೆ 'ದೇವತಾ ಮನುಷ್ಯ' (1988). ಸಿಂಗೀತಂ ಶ್ರೀನಿವಾಸ್ ನಿರ್ದೇಶನದ ಈ ಚಿತ್ರ ಹಿಂಸೆಯ ವಿರುದ್ಧ ಮಾನವೀಯತೆಯ ಗೆಲುವನ್ನು ಕಾಣಿಸುವ ಪ್ರಯತ್ನ. ತನಗೆ ಅನ್ಯಾಯ ಎಸಗಿದವರನ್ನು ಕೊಲ್ಲಲು ಮುಂದಾಗುವ ನಾಯಕ, ದಾರಿಯಲ್ಲಿ ಎದುರಾಗುವ ಕಂದಮ್ಮನ ಕಾರಣದಿಂದಾಗಿ ಪ್ರತೀಕಾರ ಭಾವನೆಯನ್ನು ತೊರೆಯುತ್ತಾನೆ. ಮಗಳ ಪೋಷಣೆಯಲ್ಲಿ ಅವನ ವ್ಯಕ್ತಿತ್ವ ಉದಾತ್ತವಾಗುತ್ತಾ ಹೋಗುತ್ತದೆ.

1991ರಲ್ಲಿ ತೆರೆಕಂಡ, ರವಿಚಂದ್ರನ್ ನಟನೆ–ನಿರ್ದೇಶನದ 'ಶಾಂತಿ ಕ್ರಾಂತಿ' ಚಿತ್ರ ಕೂಡ ಗಾಂಧಿಯ ಆದರ್ಶವನ್ನು ಒರೆಗೆ ಹಚ್ಚುವ ಕೆಲಸ ಮಾಡುತ್ತದೆ. ಚಿತ್ರದ ಇಬ್ಬರು ನಾಯಕರಲ್ಲಿ ಒಬ್ಬ ಶಾಂತಿಯನ್ನು ಪ್ರತಿಪಾದಿಸಿದರೆ, ಮತ್ತೊಬ್ಬ ಕ್ರಾಂತಿಯಿಂದಷ್ಟೇ ಬದಲಾವಣೆ ಸಾಧ್ಯ ಎಂದು ನಂಬಿದ ವ್ಯಕ್ತಿ. ಮಧ್ಯರಾತ್ರಿಯಲ್ಲಿ ಹೆಣ್ಣೊಬ್ಬಳು ಯಾವುದೇ ಆತಂಕವಿಲ್ಲದೆ ಒಂಟಿಯಾಗಿ ಸಂಚರಿಸುವ ಪರಿಸ್ಥಿತಿ ಇರುವುದನ್ನು ಸ್ವಾತಂತ್ರ್ಯದ ಸಂಕೇತವಾಗಿ ಕಂಡ ಗಾಂಧೀಜಿಯ ಮಾತನ್ನು ಒರೆಗೆ ಹಚ್ಚುವ ಕಥನಗೀತೆಯೊಂದು ಈ ಚಿತ್ರದಲ್ಲಿದೆ (ಸಾಹಿತ್ಯ–ಸಂಗೀತ: ಹಂಸಲೇಖ). 'ಮಧ್ಯ ರಾತ್ರೀಲಿ ಹೈವೆ ರಸ್ತೇಲಿ, ಮಳೆಯು ನಿಂತಿದೆ ಒಂಟಿ ಹೆಣ್ಣು ಬರ್ತಿದೆ / ಕಾಲು ದಾರೀಲಿ ನಿಂತ ನೀರಲ್ಲಿ, ನಡೆಯುತಿದ್ದರೆ ನೋಡೊ ಆಸೆ ಬರ್ತಿದೆ' ಎನ್ನುವ ಚಿತ್ರಣದ ಮೂಲಕ ಗೀತೆ ಆರಂಭವಾಗುತ್ತದೆ. ಆ ಯುವತಿ ಕೆರಳುಕಣ್ಣುಗಳ ಪಾಲಿಗೆ, 'ರಾತ್ರಿಯಲ್ಲಿ ಜಾರಿ ಬಿದ್ದ ಚಂದಿರನ ತುಂಡು'. ಆಸೆಯನ್ನು ದುಃಖಕ್ಕೆ ಮೂಲ ಎಂದ ಬುದ್ಧ ಹಾಗೂ ಹಿಂಸೆಯಿಂದ ನಾಶ ಎಂದ ಶಾಂತಿದೂತ ಗಾಂಧಿಯ ಕುರಿತು ಕೋರಸ್ ಹಾಡಿದರೆ, ನನ್ನ ದುಃಖವ ಕೇಳದೆ ಬುದ್ಧ ಎಲ್ಲಿಗೆ ಹೋದ ಹಾಗೂ ನನ್ನ ಕಾಯದೆ ಬಾಪು ಎಲ್ಲಿದೆ ಹೋದ ಎನ್ನುವ ಅಳಲು ಒಂಟಿ ಹೆಣ್ಣಿನದು. ತನ್ನ ನಾಯಕಿಯನ್ನು ಕಾಪಾಡಲು ಪ್ರತ್ಯಕ್ಷನಾಗುವ ಕ್ರಾಂತಿಪುರುಷ, 'ನಡು ರಾತ್ರಿ ಸ್ವಾತಂತ್ರ್ಯ ಕೊಟ್ಟರೆ, ನೀವು ತಂದು ಬೀದೀಲಿ ಇಟ್ಟರೆ / ನಮ್ಮ ಊರು ಎಂದು ರಾಮರಾಜ್ಯವಾಗದು' ಎಂದು ಪುಂಡರಿಗೆ ಬುದ್ಧಿ ಹೇಳುವುದರೊಂದಿಗೆ, 'ಗಾಂಧಿಯಿದ್ದ ದೇಶ ನನ್ನದು, ಬುದ್ಧನಿದ್ದ ಭೂಮಿ ನನ್ನದು' ಎಂದು ನಾಯಕ–ನಾಯಕಿ ಬೀಗುವುದರೊಂದಿಗೆ ಹಾಡು ಕೊನೆಗೊಳ್ಳುತ್ತದೆ.

ಎನ್.ಟಿ. ಜಯರಾಮ ರೆಡ್ಡಿ ನಿರ್ದೇಶನದ 'ಕ್ರಾಂತಿ ಗಾಂಧಿ' (1992) ಗಾಂಧಿಯ ರೂಪಕವನ್ನು ಬಳಸಿಕೊಂಡು ಸ್ವಾತಂತ್ರ್ಯೋತ್ತರ ಭಾರತದಲ್ಲಿನ ಅವ್ಯವಸ್ಥೆಯನ್ನು ತಡೆಗಟ್ಟುವ ಯುವಕನೊಬ್ಬನ ಸಾಹಸದ ಕಥನ. ಭ್ರಷ್ಟ ವ್ಯವಸ್ಥೆಯೇ ಜನರ ವಿರುದ್ಧ ತಿರುಗಿಬೀಳುವಂತೆ ಮಾಡುವ ಕ್ರಾಂತಿ ಗಾಂಧಿ, ಹಿಂದೂ ಮುಸ್ಲಿಂ ಸಾಮರಸ್ಯದ ಕುರಿತೂ ಮಾತನಾಡುತ್ತಾನೆ. 'ಮಹಾತ್ಮ' (1998) ಎಚ್.